# ಬೈಡೆನ್ ಗೆಲುವು, ಭಾರತದತ್ತ ಎಷ್ಟು ಒಲವು?

**ಮುಂದುವರಿಯಲಿದೆ ಎಚ್1ಬಿ ವೀಸಾ ಬಿಕ್ಕಟ್ಟು   ರಕ್ಷಣಾ ವಲಯದಲ್ಲಿ ಮಾತ್ರ ಹೊಸದಿಲ್ಲಿಗೆ ಆಶಾವಾದ**

**ಹೊಸದಿಲ್ಲಿ:** ಡೆಮಾಕ್ರಟಿಕ್ ಪಕ್ಷದ ಜೋ ಬೈಡೆನ್ ಅವರು ಅಮೆರಿಕದ ಮುಂದಿನ ಅಧ್ಯಕ್ಷರಾಗುವುದು ಬಹುತೇಕ ಖಚಿತ. ಬರಾಕ್ ಒಬಾಮಾ ಅಧ್ಯಕ್ಷೀಯ ಅವಧಿಯಲ್ಲಿ ಎಂಟು ವರ್ಷ ಕಾಲ ಉಪಾಧ್ಯಕ್ಷರಾಗಿದ್ದ ಬೈಡೆನ್ ಅವರಿಗೆ ಭಾರತದ ದ್ವಿಪಕ್ಷೀಯ ಬಾಂಧವ್ಯ ಚಿರಪರಿಚಿತ. ಈಗ ಇರುವ ಬಾಂಧವ್ಯದ ಸ್ವರೂಪ ಎಷ್ಟು ಮಟ್ಟಿಗೆ ಬದಲಾಗಲಿದೆ ಎನ್ನುವ ಕೌತುಕದ ಪ್ರಶ್ನೆಯೂ ಭಾರತೀಯರಲ್ಲಿ ಮೂಡಿದೆ. ಆದರೆ ಒಂದಂತೂ ನಿಜ, ಏಷ್ಯಾ ಖಂಡದಲ್ಲಿ ಚೀನಾ ಸೃಷ್ಟಿಸುತ್ತಿರುವ ಅಧ್ವಾನ ಹತ್ತಿಕ್ಕಲು ಬೈಡೆನ್ ಪಾಲಿಗೆ ಭಾರತದ ನಂಟು ಅನಿವಾರ್ಯ.

ಅಮೆರಿಕ 2020 ಅಧ್ಯಕ್ಷೀಯ ಚುನಾವಣೆ

ರಕ್ಷಣಾ, ಕಾರ್ಯತಂತ್ರ ಮತ್ತು ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿ ಭಾರತದ ಜತೆಗಿನ ಅಮೆರಿಕ ನಂಟಿನಲ್ಲಿ ಹೆಚ್ಚೇನೂ ಬದಲಾವಣೆ ಕಾಣಿಸಲಾರದು. 2000ನೇ ಇಸ್ವಿಯಿಂದ ತುಳಿದಿರುವ ದಾರಿಯನ್ನೇ ಇನ್ನಷ್ಟು ವಿಸ್ತರಿಸಿ ಮುನ್ನಡೆಯುವ ಸಾಧ್ಯತೆ ಇದೆ. ಆದರೆ, ವಾಣಿಜ್ಯ ಸಂಬಂಧ ಮತ್ತು ಎಚ್1ಬಿ ವೀಸಾ ವಿಷಯ ಬಂದಾಗ ಉಭಯ ದೇಶಗಳ ನಡುವೆ ಸಾಕಷ್ಟು ಕಗ್ಗಂಟು ಉಳಿದು ಬಂದಿವೆ. ಬೈಡೆನ್ ಅವಧಿಯಲ್ಲಿಯೂ ಅವಕ್ಕೆ ಮುಕ್ತಿ ಕಾಣುವುದು ದುಸ್ತರ. ಟ್ರಂಪ್ ಅವಧಿಯಲ್ಲಿ ತಿದ್ದುಪಡಿಗೊಂಡ ಎಚ್1ಬಿ ವೀಸಾ ನಿಯಮಗಳು ಮುಂದಿನ ವರ್ಷಗಳಲ್ಲಿಯೂ ಹೆಚ್ಚೇನು ಬದಲಾವಣೆ ಕಾಣಲಾರವು. ಕಾಶ್ಮೀರ ಮತ್ತು ಬಹುಸಂಖ್ಯಾತರ ಪ್ರಾಬಲ್ಯದ ವಿಷಯಗಳು ಒಂದಷ್ಟು ಬಿರುಸಿನ ಭಿನ್ನಾಭಿಪ್ರಾಯಗಳಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ. ಡೊನಾಲ್ಡ್ ಟ್ರಂಪ್ ಜತೆಗೆ ತುಂಬ ಆತ್ಮೀಯ ಸ್ನೇಹ ಹೊಂದಿದ್ದ ಪ್ರಧಾನಿ ಮೋದಿ ಅವರು ಬೈಡೆನ್‌ರನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ಕಸರತ್ತು ನಡೆಸಬೇಕಾಗಬಹುದು ಎಂದು ವಿದೇಶಾಂಗ ವ್ಯವಹಾರಗಳ ತಜ್ಞರು ಅಂದಾಜಿಸಿದ್ದಾರೆ.

## 1 ಬೈಡೆನ್-ಕಮಲಾ ಹ್ಯಾರಿಸ್

ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಕಮಲಾ ಹ್ಯಾರಿಸ್ ಅವರು ಕೂಡ ಗೆಲ್ಲುವುದು ಖಚಿತ. ಬಿಕ್ಕಟ್ಟಿನ ಈ ಸಂದರ್ಭ ಹೊಂದಾಣಿಕೆಯ ಹೊಸ ನೀತಿಗಳನ್ನು ರೂಪಿಸುವ ಜವಾಬ್ದಾರಿಗೆ ಬೈಡೆನ್-ಕಮಲಾ ಜೋಡಿ ಹೆಗಲು ನೀಡಲಿದೆ. ಬೈಡೆನ್ ಅವರಿಗೆ ಈಗ 77 ವರ್ಷ. ಮುಂದಿನ ಅವಧಿಗೆ ಸ್ಪರ್ಧಿಸುವುದಿಲ್ಲ ಎನ್ನುವ ಮಾತನ್ನು ಅವರು ಆಡಿದ್ದಾರೆ. ಅಲ್ಲಿಗೆ 2024ರ ಅಧ್ಯಕ್ಷೀಯ ಚುನಾವಣೆಯಲ್ಲಿ ಕಮಲಾ ಹ್ಯಾರಿಸ್ ಅಧ್ಯಕ್ಷೀಯ ಅಭ್ಯರ್ಥಿಯಾಗುವುದು ಖಾತ್ರಿಯಾಗಿದೆ. ಈ ಹಿನ್ನೆಲೆಯಲ್ಲಿ ದೂರ ದೃಷ್ಟಿಯ ಸಮತೋಲಿತ ನೀತಿಗಳಿಗೆ ಈ ಜೋಡಿ ಒತ್ತು ಕೊಡಲಿದೆ.

## 2 ಜಾಗತಿಕ ಸವಾಲುಗಳು

ಪ್ರಚಾರದ ಸಂದರ್ಭದಲ್ಲಿ ಬೈಡೆನ್, ಭಾರತೀಯ ಮೂಲದ ಮತದಾರರ ಬಗ್ಗೆ ಹೆಚ್ಚು ಭರವಸೆ ವ್ಯಕ್ತಪಡಿಸಿದ್ದರು. ಅವರ ನಂಬಿಕೆ ಈಗ ಗೆದ್ದಿದೆ. ಮುಂದಿನ ದಿನಗಳಲ್ಲಿ ಅದಕ್ಕೆ ತಕ್ಕ ಪ್ರತಿಫಲವನ್ನು ಬೈಡೆನ್‌ರಿಂದ ಎನ್ಆರ್‌ಐಗಳು ನಿರೀಕ್ಷಿಸಿದ್ದಾರೆ. ಇನ್ನು ಭಾರತ-ಅಮೆರಿಕದ ಸಂಬಂಧ ಸಾಂಸ್ಥಿಕ ರೂಪ ಪಡೆದಿರುವುದರಿಂದ ಇದರಲ್ಲಿ ಹೆಚ್ಚೇನೂ ಬದಲಾವಣೆಗಳು ಆಗಲು ಸಾಧ್ಯವಿಲ್ಲ. ಭಾರತದ ಸ್ನೇಹ ಬೈಡೆನ್ ಪಾಲಿಗೆ ಅನಿವಾರ್ಯ. ಇದನ್ನು ಬೈಡೆನ್ ಅವರ ಸಲಹೆಗಾರ ಆಂಟನಿ ಬ್ಲಿಂಕೇನ್, ''ಭಾರತವನ್ನು ಹೊರಗಿಟ್ಟು ಜಾಗತಿಕ ಸವಾಲುಗಳನ್ನು ಇತ್ಯರ್ಥ ಪಡಿಸುವುದು ಅಸಾಧ್ಯ. ಮುಂದೆ ಭಾರತದೊಂದಿಗಿನ ಸಂಬಂಧ ಇನ್ನಷ್ಟು ಬಲಗೊಳ್ಳುವುದು ನಿಶ್ಚಿತ,'' ಎಂದಿದ್ದಾರೆ.

## 3 ರಕ್ಷಣೆ ಮತ್ತು ಭದ್ರತೆ

2000ನೇ ಇಸ್ವಿಯಿಂದ ರಕ್ಷಣಾ ಮತ್ತು ಭದ್ರತೆ ವಿಷಯದಲ್ಲಿ ಭಾರತ-ಅಮೆರಿಕ ನಡುವೆ ಬಲವಾದ ನಂಟಿದೆ. ಅದು ಇನ್ನಷ್ಟು ಬಲಗೊಳ್ಳಬಹುದೇ ವಿನಾ ಸಡಿಲಿಕೆ ಅಸಾಧ್ಯ ಎನ್ನುವುದು ರಾಜತಾಂತ್ರಿಕರ ಲೆಕ್ಕಾಚಾರ.



ಅಮೆರಿಕ ಅಧ್ಯಕ್ಷ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಜೋ ಬೈಡೆನ್ ಗೆಲುವಿನ ಗುರಿ ತಲುಪಿರುವುದು ಖಚಿತವಾಗುತ್ತಿದ್ದಂತೆಯೇ ಫಿಲಿಡೆಲ್ಫಿಯಾದಲ್ಲಿ ಅವರ ಬೆಂಬಲಿಗರು ವಿಜಯೋತ್ಸವ ಆಚರಿಸಿದರು.

## 4 ಚೀನಾ ಜತೆಗಿನ ನಂಟು

ಈ ವಿಷಯದಲ್ಲಿ ಬೈಡೆನ್ ತಂಡದಲ್ಲಿ ಭಿನ್ನ ಧೋರಣೆ ಇದೆ. ಇದರ ಪರಿಣಾಮ ಅಮೆರಿಕ-ಭಾರತ ಹಾಗೂ ಭಾರತ-ಚೀನಾ ಸಂಬಂಧಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಟ್ರಂಪ್ ರೀತಿಯಲ್ಲಿ ಚೀನಾವನ್ನು ಹದ್ದುಬಸ್ತಿನಲ್ಲಿಡುವ ಬಿಗಿ ನಿಲುವು ತಳೆಯಬೇಕು ಎನ್ನುವ ಅಭಿಪ್ರಾಯ ಬೈಡೆನ್ ತಂಡದ ಕೆಲವರಲ್ಲಿ ಇದ್ದರೆ, ಇನ್ನೂ ಹಲವರು, ''ಅದೆಲ್ಲ ಸಾಧ್ಯವಾಗದ ಮಾತು, ಚೀನಾ-ಅಮೆರಿಕ ಆರ್ಥಿಕತೆಗಳು ಬಲವಾಗಿದ್ದಷ್ಟೇ ಸಂಕೀರ್ಣ ಸಂಬಂಧವನ್ನು ಹೊಂದಿವೆ. ಅವರನ್ನು ಬೇರ್ಪಡಿಸಲು ಸಾಧ್ಯವಿಲ್ಲ'' ಎಂದಿದ್ದಾರೆ.

## 5 ಇಂಡೊ-ಪೆಸಿಫಿಕ್ ಕಾರ್ಯತಂತ್ರ

ಈ ವಿಷಯದಲ್ಲಿ ಬೈಡೆನ್ ಕಾರ್ಯತಂತ್ರ ಏನು ಎನ್ನುವುದು ಸ್ಪಷ್ಟವಿಲ್ಲ. ಭಾರತೀಯ ವಿದೇಶಾಂಗ ನೀತಿಯ ಕೇಂದ್ರ ಬಿಂದುವಾಗಿರುವ ಈ ಪ್ರದೇಶದ ವಿಷಯದಲ್ಲಿ ಬೈಡೆನ್ ಸ್ಪಷ್ಟತೆಗಾಗಿ ಕಾಯ್ದು ನೀಡಲಾಗುತ್ತಿದೆ. ಪ್ರಚಾರದ ವೇಳೆಯಲ್ಲಿಯೂ ಬೈಡೆನ್ ಈ ಕುರಿತು ನಿಲುವು ಸ್ಪಷ್ಟಪಡಿಸಿಲ್ಲ.

## 6 ವಾಣಿಜ್ಯ ವಿಷಯಗಳು

ಅಧಿಕಾರದಲ್ಲಿ ಯಾರೇ ಇದ್ದರೂ ಭಾರತ-ಅಮೆರಿಕ ವಾಣಿಜ್ಯ ಬಿಕ್ಕಟ್ಟುಗಳು ಸಂಪೂರ್ಣ ಇತ್ಯರ್ಥ ಅಸಂಭವ. ಸೌಮ್ಯ ಧೋರಣೆಯ ಬರಾಕ್ ಒಬಾಮಾ ಅಧ್ಯಕ್ಷರಾಗಿದ್ದಾಗಲೂ ತಕರಾರುಗಳು ಇದ್ದವು. 'ಅಮೆರಿಕ ಫಸ್ಟ್' ಎನ್ನುವ ಟ್ರಂಪ್ ಘೋಷಿತ ಸ್ವದೇಶಿ ಧೋರಣೆ ಬೈಡೆನ್ ಅವಧಿಯಲ್ಲಿಯೂ ಮುಂದುವರಿಯುತ್ತದೆ. ಇದು ಭಾರತದ ಜತೆಗಿನ ವಾಣಿಜ್ಯ ನಂಟಿಗೆ ಹೆಚ್ಚಿನ ಅಡೆತಡೆ ಉಂಟು ಮಾಡುತ್ತದೆ.

## 7 ಮಾನವ ಹಕ್ಕುಗಳ ಉಲ್ಲಂಘನೆ

ಮಾನವ ಹಕ್ಕುಗಳ ವಿಷಯದಲ್ಲಿ ಬೈಡೆನ್-ಕಮಲಾ ಹ್ಯಾರಿಸ್ ಜೋಡಿ ತುಸು ಹೆಚ್ಚು ಎನ್ನಿಸುವ ಕಠಿಣ ನಿಲುವನ್ನು ಹೊಂದಿದೆ. ಇದು ಜಮ್ಮು-ಕಾಶ್ಮೀರ ಮತ್ತು ಹಿಂದೂ ಬಹುಸಂಖ್ಯಾತರ ಪ್ರಾಬಲ್ಯದಂತಹ ವಿಷಯಗಳಲ್ಲಿ ಭಾರತಕ್ಕೆ ಕಿರಿಕಿರಿ ಉಂಟು ಮಾಡುವ ಸಾಧ್ಯತೆ ಇದೆ.

## 8 ಆಫ್ಘನ್ ಭಯೋತ್ಪಾದನೆ

ಅಫಘಾನಿಸ್ತಾನದಲ್ಲಿ ಭಯೋತ್ಪಾದನೆ ನಿಗ್ರಹಿಸುವ ವಿಷಯದಲ್ಲಿ ಬೈಡೆನ್ ಧೋರಣೆ ಈ ಮೊದಲಿನಿಂದಲೂ ಸ್ಪಷ್ಟ. ಅಲ್ಲಿ ಹೆಚ್ಚು ಜವಾಬ್ದಾರಿ ತೆಗೆದುಕೊಳ್ಳುವುದು ಬೇಡ, ಬರೀ ನಿಗಾ ವ್ಯವಸ್ಥೆಗೆ ಭದ್ರತೆಯನ್ನು ಸೀಮಿತಗೊಳಿಸಬೇಕು ಎನ್ನುವುದು ಅವರ ಸಲಹೆಯಾಗಿತ್ತು. ಇದು ಮುಂದಿನ ದಿನಗಳಲ್ಲಿ ಜಾರಿಗೊಳ್ಳಲಿದೆ. ಸೇನಾ ವಾಪಸಾತಿಯ ಮೂಲಕ ಟ್ರಂಪ್ ಅವರು ಈ ಪ್ರಕ್ರಿಯೆಗೆ ಚಾಲನೆ ನೀಡಿದ್ದಾಗಿದೆ.

## 9 ಪ್ಯಾರಿಸ್ ಒಪ್ಪಂದ

ಹವಾಮಾನ ಸುಸ್ಥಿರತೆ ಕಾಯ್ದುಕೊಳ್ಳುವ ದಿಸೆಯಲ್ಲಿನ ಪ್ಯಾರಿಸ್ ಒಪ್ಪಂದದ ವ್ಯಾಪ್ತಿಗೆ ಅಮೆರಿಕ ವಾಪಸಾಗುವುದು ಬಹುತೇಕ ಖಚಿತ. ಈ ವಿಷಯದಲ್ಲಿನ ಟ್ರಂಪ್ ನಡೆ ಹಿನ್ನೆಲೆಗೆ ಸರಿಯುತ್ತದೆ. ಇದೇ ವೇಳೆ, ಕಲ್ಲಿದ್ದಿಲು ಬಳಕೆ ವಿಷಯದಲ್ಲಿ ಭಾರತ ತೆಗೆದುಕೊಂಡ ನಿರ್ಧಾರವನ್ನು ಹಿಮ್ಮೆಟ್ಟಲು ಬೈಡೆನ್ ಯತ್ನಿಸುವ ಅಪಾಯ ಇದೆ.

## 10 ಎಚ್1 ಬಿ ವೀಸಾ

ವಲಸೆ ಉದ್ಯೋಗಿಗಳಿಗೆ ಸಂಬಂಧಿಸಿದ ಈ ನಿಯಮಗಳು ಟ್ರಂಪ್ ಅವಧಿಯಲ್ಲಿ ವಿಪರೀತ ಬಿಗಿಗೊಂಡವು. ಇದರಿಂದ ಭಾರತದ ಟೆಕ್ಕಿಗಳು ತೀವ್ರ ಇಕ್ಕಟ್ಟಿಗೆ ಒಳಗಾಗಿದ್ದು ನಿಜ. ಆದರೆ, ಬೈಡೆನ್ ಈ ನಿಯಮಗಳಲ್ಲಿ ಸಡಿಲಿಕೆ ಮಾಡುವ ಸಂಭವ ಇಲ್ಲ. ಎನ್ಆರ್‌ಐಗಳ ಆತಂಕ ಯಥಾಪ್ರಕಾರ ಮುಂದುವರಿಯುವ ಸಾಧ್ಯತೆ ಇದೆ.